ತಮಿಳುನಾಡಿನ ನಾಯನಾರ್ ಸಂತರು – ೧


# ಕುಂಗಿಲಿಯ ಕಲಯ ನಾಯನಾರ್

ಕಥೆ: ನಮಶ್ಶಿವಾಯಂ

ಚಿತ್ರ : ಶಂಕರ್


**1**

ಕಲಯನಾರ್ 63 ಮಂದಿ ಶಿವನ ಮಹಾನ್ ಶಿವಭಕ್ತರಲ್ಲಿ ಒಬ್ಬನು. ಅವನು ತಿರುಕ್ಕಡವೂರ್ ಎಂಬಲ್ಲಿ ವಾಸಿಸುತ್ತಿದ್ದ. ಅವನು ಭಗವಾನ್ ಅಮೃತಘಟೇಶ ಹಾಗೂ ದೇವಿ ಅಭಿರಾಮಿ ಇವರ ಮುಂದೆ ಧೂಪ ಹಚ್ಚಿ ಆರಾಧಿಸುತ್ತಿದ್ದ.




**2**

ಹಲವು ವರ್ಷಗಳಿಂದ ಮಾಡಿಕೊಂಡು ಬಂದ ಅವನ ಆರಾಧನೆಗೆ ಈಗ ತೊಂದರೆ ಒದಗಿ ಬಂತು. ಕಲಯನಾರ್ ಬಡತನದಿಂದ ಕಂಗೆಟ್ಟುಹೋದ.





**3**

ದಿನೇದಿನೇ ಅವನ ಬಡತನ ಇನ್ನಷ್ಟು ಹದಗೆಟ್ಟಿತು. ಕಲಯನಾರ್ ತನ್ನ ಬೆಳ್ಳಿ ಪಾತ್ರೆಗಳನ್ನು ಹಾಗೂ ದನಕರುಗಳನ್ನು ಮಾರಿದ.



**4**

ಕೊನೆಗೆ ಅವನು ಧೂಪ ಹಚ್ಚುವ ಕೆಲಸಕ್ಕೋಸ್ಕರ ತನ್ನದಾಗಿದ್ದ ತುಂಡು ಭೂಮಿಯನ್ನೂ ಮಾರಬೇಕಾಯಿತು.




5

ಕಲಯನಾರ್‌ನ ಪತ್ನಿ ಒಂದು ನಿರ್ಧಾರಕ್ಕೆ ಬಂದಳು. ತನ್ನ ಮಾಂಗಲ್ಯ ಸೂತ್ರವನ್ನು ಕಳಚಿ, ಅದರ ಜಾಗದಲ್ಲಿ ಒಂದು ಅರಶಿನದ ತುಂಡನ್ನು ಕಟ್ಟಿಕೊಂಡಳು.





6

ಬೇರೆ ಯಾವ ದಾರಿಯನ್ನೂ ಕಾಣದೆ, ಕಲಯನಾರ್ ಕಂಬನಿ ದುಂಬಿ ಹಾಗೆ ಮಾಡಲು ಹೊರಟು ನಿಂತ.





7

ಬೀದಿಯಲ್ಲಿ ಕಲಯನಾರ್ ಮಾಂಗಲ್ಯದೊಂದಿಗೆ ಹೋಗುತ್ತಿದ್ದಾಗ ದೇವಾಲಯದ ಗೋಪುರವನ್ನು ನೋಡಿದ. ''ಅಯ್ಯೋ! ಇಂದು ಸೋಮವಾರ, ಶಿವನಿಗೆ ವಿಶೇಷ ದಿನ! ನಾನು ದೇವರಿಗೆ ಧೂಪವನ್ನು ತಯಾರಿಸಿಲ್ಲವಲ್ಲ!'' ಎಂದು ಅವನು ದುಃಖಿಸಿದ. ಅಷ್ಟರಲ್ಲಿ ಅಲ್ಲೊಬ್ಬ ಧೂಪದ ಚೀಲವನ್ನು ಹೊತ್ತ ವ್ಯಾಪಾರಿ ಕಾಣಿಸಿಕೊಂಡ. ಅದನ್ನು ನೋಡಿ ಕಲಯನಾರ್‌ಗೆ ತನ್ನ ಹೆಂಡತಿ, ಹಸಿದ ಮಕ್ಕಳು ಎಲ್ಲವೂ ಮರೆತುಹೋಯಿತು.





8




9
ದೇವಿ ಅಭಿರಾಮಿಯ ಮುಂದೆ ಧೂಪ ತೋರಿಸಿ. . . . .
ತಾಯಿ, ತಂದೆ! ನೀವು ನನ್ನ ಮೇಲೆ ತೋರಿರುವ ಕರುಣೆ ಎಂಥದು! ನೆನದಾಗ ನನ್ನ ಮನಸ್ಸು ಕರಗುತ್ತದೆ!
10
ದೇವರಿಗೆ ಧೂಪ ಹಾಕಿದ ಆನಂದದಲ್ಲೇ ಕಲಯನಾರ್ ದೇವಾಲಯದಲ್ಲಿ ಮಲಗಿ ನಿದ್ರಿಸಿದ.
ಅಪ್ಪ ಇನ್ನೂ ಬರಲಿಲ್ಲ. ಹಸಿದು ಸಾಯುತ್ತಿದ್ದೇವೆ.
ಕತ್ತಲಾಯಿತು. ಇನ್ನೂ ಅವರು ಮರಳಿ ಬರಲಿಲ್ಲ.
11
ಅಷ್ಟರಲ್ಲಿ ಭಗವಂತ ಹಾಗೂ ದೇವಿ ಕಲಯನಾರ್‌ನ ಮನೆಯಲ್ಲಿ ಎಲ್ಲ ಸಂಪತ್ತನ್ನೂ ಸುರಿದರು.
ಏನಾಶ್ಚರ್ಯ! ನಮ್ಮ ಮನೆ ಎಂಟು ಮಹಡಿಯ ಬಂಗಲೆಯಾಯಿತು! ಎಷ್ಟೊಂದು ಧನ, ಧಾನ್ಯ, ಆಭರಣ, ಹಾಗೂ ನವರತ್ನಗಳು!
ಅಮ್ಮ, ನೋಡಿಲ್ಲಿ! ಎಂಥ ತಿಂಡಿ ಪದಾರ್ಥಗಳು! ಅಪ್ಪ ಇವನ್ನೆಲ್ಲ ಕಳುಹಿಸಿದ್ದಾರೇನು?
12
ನಿದ್ರೆಯಿಂದ ಎಚ್ಚೆತ್ತ ಕಲಯನಾರ್ ಆತಂಕದಿಂದ ಮನೆಯತ್ತ ಧಾವಿಸಿದ.
ಇದೇನು? ಇದು ನನ್ನ ಮನೆಯೆ? ಇವರು ನನ್ನ ಮಕ್ಕಳೆ? ಶ್ರೀಕೃಷ್ಣ ಕುಚೇಲನ ಅವಲಕ್ಕಿಯಿಂದ ಸಂತೃಪ್ತನಾಗಿ, ಅವನ ಮನೆಗೆ ಸಂಪತ್ತಿನ ಮಳೆಗರೆದಂತೆ, ಇಂದು ಶಿವನು ನನ್ನ ಧೂಪಕ್ಕೆ ಪ್ರತಿಯಾಗಿ ಇದೆಲ್ಲವನ್ನೂ ನೀಡಿದ್ದಾನೆ.


13

ಊರೆಲ್ಲ ಈ ಪವಾಡ ಭಾರೀ ಸುದ್ದಿಯಾಯಿತು. ಊರಿನ ಮುಖಂಡರೆಲ್ಲ ದೇವಾಲಯದಲ್ಲಿ ಸಭೆ ಸೇರಿದರು. ವಿಶೇಷ ಪೂಜೆ ನಡೆಯಿತು.




14

ತಿರುಪ್ಪನಂದಾಳ್ ಕ್ಷೇತ್ರದಲ್ಲಿ ಭಕ್ತೆಯೊಬ್ಬಳ ಸಲುವಾಗಿ ಶಿವಲಿಂಗವು ಒಂದು ದಿಕ್ಕಿಗೆ ಬಾಗಿ ನಿಂತಿತ್ತು. ಚೋಳರಾಜನು ಅದನ್ನು ನೇರವಾಗಿ ನಿಲ್ಲಿಸಲು ಪ್ರಯತ್ನಿಸಿದ. ಆದರೆ ಆನೆಗಳಿಂದಲೂ ಅದನ್ನು ಕದಲಿಸಲಾಗಲಿಲ್ಲ.



15

ಕಲಯನಾರ್ ಯಾತ್ರೆ ಮಾಡುತ್ತಾ ತಿರುಪ್ಪನಂದಾಳ್‌ಗೆ ಬಂದ. ಅಲ್ಲಿ ಬಾಗಿ ನಿಂತ ಶಿವಲಿಂಗವನ್ನು ಅವನು ಪೂಜಿಸಿದ. ಅವನು ಒಂದು ಹಾರವನ್ನು ತಂದು ಅದರ ಒಂದು ತುದಿಯನ್ನು ಶಿವಲಿಂಗಕ್ಕೆ ಸುತ್ತಿ, ಇನ್ನೊಂದು ತುದಿಯನ್ನು ತನ್ನ ಕೊರಳಿಗೆ ಕಟ್ಟಿಕೊಂಡು ಎಳೆದ.




16

ಆ ಕ್ಷಣದಲ್ಲೇ ಶಿವಲಿಂಗವು ನೇರವಾಗಿ ನಿಂತಿತು. ಚೋಳ ರಾಜನು ಕಲಯನಾರ್‌ಗೆ ಬೇಕಾದಷ್ಟು ಸಂಪತ್ತು , ಸನ್ಮಾನ ಗಳನ್ನು ನೀಡಿ ಗೌರವಿಸಿ, ತಿರುಕ್ಕಡವೂರಿಗೆ ಕಳುಹಿಸಿಕೊಟ್ಟ.

